ದಿನಾಂಕ 02.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ 6 ರಿಂದ 9 ರ ಪರ ವಕೀಲರಿಂದಃ-**

ದಾವಾ ಸ್ವತ್ತುಗಳು ನನ್ನ ಅಜ್ಜ ಪೆಮ್ಮಯ್ಯರವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತವೆ. ಪೆಮ್ಮಯ್ಯರವರ ತಂದೆಯ ಹೆಸರು ಕಾಳಪ್ಪ. ಕಾಳಪ್ಪರವರಿಗೆ ಪೆಮ್ಮಯ್ಯ ಮತ್ತು ಕುಟ್ಟಪ್ಪ ಎಂಬ ಇಬ್ಬರು ಮಕ್ಕಳಿದ್ದರು. ಪೆಮ್ಮಯ್ಯರವರಿಗೆ ಬೆಳ್ಳಿಯಪ್ಪ ಎಂಬ ಒಬ್ಬನೇ ಮಗ. ಕುಟ್ಟಪ್ಪರವರು ಅವಿವಾಹಿತರಾಗಿ ಮೃತರಾಗಿರುತ್ತಾರೆ. ಪೆಮ್ಮಯ್ಯರವರು ಕುಟುಂಬದ ಪಟ್ಟೇದಾರರಾಗಿದ್ದರು ಎಂದರೆ ಸರಿ. ಆ ಕಾರಣದಿಂದ ಕಂದಾಯ ದಾಖಲೆಗಳು ಅವರ ಹೆಸರಿನಲ್ಲಿ ದಾಖಲಾಗಿದ್ದವು ಎಂದರೆ ಸರಿ. ಪೆಮ್ಮಯ್ಯರವರು ಮೃತರಾದ ಬಳಿದ ದಾವಾ ಸ್ವತ್ತುಗಳ ಕಂದಾಯ ದಾಖಲೆಗಳು ನನ್ನ ತಂದೆಯ ಹೆಸರಿಗೆ ದಾಖಲಾಗಿರುತ್ತವೆ. ನಾನು 1987 ನೇ ಇಸವಿಯಲ್ಲಿ ಸೇನೆಯಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಿವೃತ್ತಿ ಹೊಂದಿದ ಬಳಿಕ ನಾನು ಬೆಂಗಳೂರಿನಲ್ಲಿ ನೆಲೆಸಿದ್ದೆನು. ಆಗಾಗ್ಗೆ ಹರಿಹರ ಗ್ರಾಮಕ್ಕೆ ಬಂದು ಹೋಗುತ್ತಿದ್ದೆನು.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

ಸಹಿಃ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

**(ಸಾಕ್ಷಿದಾರರ ಸಹಿ)**